


■ ವಸುಮತಿ ಉಡುಪ
ಕಲೆ: ಎಚ್.ಎಸ್. ಮೋನಪ್ಪ

# ಹೊಸ ನಂಟಿನ ಕಾರ್ಮೋಡ ಕರಗಿ ಮೂಡಿತು ಮಳೆಬಿಲ್ಲು

‘ಹಂಗಾರೆ ಈ ಮಾತು ಪಕ್ಕಾ ಅಂದ್ಕೊಳ್ಲಾ? ಜಾತಕ ಗೀತಕ ಅನ್ನೋ ಪ್ರಶ್ನೇನೇ ಇಲ್ವಲ್ಲ? ಜಾತಕ ನೋಡಿ ಮಾಡಿದ್ದು ಏನಾಯ್ತೂಂತ ಗೊತ್ತಾಯ್ತಲ್ಲ?’

‘ಸಾಕು, ಹೋಗಿ ಮಲಕ್ಕೋ. ನೀನು ಕೈ ತೊಳ್ಕೊಂಡು ಬೆನ್ನು ಹತ್ತಿದ್ರೆ ಕಷ್ಟ ಆಗುತ್ತೆ ನಂಗೆ’.

‘ಆಯ್ತು ಬಾವ. ಯೋಚ್ನೆ ಮಾಡಿ ಅಂದ್ನಲ್ಲ. ಉತ್ತರ ಮಾತ್ರ ಒಳ್ಳೇದಾಗಿರ್ಲಿ...’

ಅಲ್ಲಿಗೆ ಮಾತು ನಿಂತಿತು. ಹಾಲ್‌ನಲ್ಲಿ ಲೇಪು ಕೊಡಕಿ ಹಾಕುವ, ‘ಹೊದಿಯೋಕೆ ಇಷ್ಟೇ ಸಾಕಾ? ಇನ್ನೂ ಬೇಕಾ?’ ಎನ್ನುವ, ಬಾವನೆಂಟನಿಗೆ ಉಪಚಾರ ಹೇಳುವ ಮಾತು ಮುಗಿಯಿತು. ಚಿದಾನಂದ ತನ್ನ ಕೋಣೆ ಸೇರಿಕೊಂಡು ಬಾಗಿಲು ಮುಂದೆ ಮಾಡಿಕೊಂಡ ಸೂಚನೆ ಸಿಕ್ಕಿತು. ಲೈಟ್ ಆಫ್ ಮಾಡಿದ ಸೋದರಮಾವ, ‘ರಾಮಾ, ಕೃಷ್ಣಾ...’ ಎನ್ನುತ್ತಾ ಆಕಳಿಸಿದ್ದು ತಮ್ಮ ರೂಮು ಸೇರಿಕೊಂಡಿದ್ದ ಭಾಮನ ಕಿವಿಗೆ ಬಿದ್ದು ನಂತರ ಮನೆಯೊಳಗೆ ಮೌನ ಮಡುಗಟ್ಟಿತು, ಸೂಕ್ಷ್ಮವಾಗಿ ಆಲಿಸಿದರಷ್ಟೇ ಕಿವಿಗೆ ಬೀಳುವ ಹುಡುಗಿಯ ಕಣ್ಣೀರಧಾರೆಯೊಂದಿಗೆ ಮಿಳಿತಗೊಂಡ ಬಿಸುಸುಯ್ಲಿನ ಸದ್ದೊಂದನ್ನುಳಿದು...

***

ಬಂದ ಕಾರ್ಯ ಮುಗಿಸಿ ಹೊರಟು ಹೋದ ಸೋದರಮಾವ. ಮನೆಯಲ್ಲಿ ಮತ್ತೆ ದಿನಚರಿ ಮುನ್ನಿನಂತೆ ಮುಂದುವರಿಯಿತು. ಅಮ್ಮನನ್ನು ಕಳೆದುಕೊಂಡ ನೋವಿನಲ್ಲೂ ಎಲ್ಲಾ ನಿಭಾಯಿಸಬಲ್ಲೆನೆಂಬ, ನಿಭಾಯಿಸಲೇಬೇಕೆಂಬ ಜವಾಬ್ದಾರಿ, ಆತ್ಮವಿಶ್ವಾಸ ಬೆಳೆಸಿಕೊಂಡಿದ್ದ ಹದಿಹರೆಯದ ಹುಡುಗಿ ಮಾತ್ರ ಕುಸಿದು ಹೋಗಿದ್ದಳು. ಹಾಗಿದ್ದರೆ ಈ ಮನೆಗೊಬ್ಬ ಮಲತಾಯಿ ಬರುತ್ತಾಳಾ? ಅಮ್ಮನ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಾಳಾ? ಅಮ್ಮ ಜತನದಿಂದ ಕೂಡಿಟ್ಟುಕೊಂಡಿದ್ದ ರಂಗುರಂಗಿನ ಸೀರೆಗಳನ್ನುಟ್ಟು, ಅಮ್ಮನ ಆಭರಣ ತೊಟ್ಟು, ಎಲ್ಲಕ್ಕಿಂತ ಹೆಚ್ಚಾಗಿ ಅಪ್ಪನ ಮನಸ್ಸನ್ನು ಸೂರೆಗೊಂಡು... ಅವಳಿಗೆ ಮಕ್ಕಳಾಗಬಹುದಾ? ಆಮೇಲೂ ಅಪ್ಪ ತಮ್ಮನ್ನು ಅದೇ ಪ್ರೀತಿಯಿಂದ ನೋಡಿಕೊಳ್ಳುತ್ತಾರಾ? ಹೀಗೇ ಎಂದು ಹೇಳಲಾಗದ ನಕಾರಾತ್ಮಕ ಭಾವನೆಗಳ ಕಲಸುಮೇಲೋಗರ.

ಭಾರ್ಗವ ತುಂಟಾಟದ ಹುಡುಗ. ಸದಾ ಅಮ್ಮನ ಹಿಂದೆ ಮುಂದೆ ಓಡಾಡಿಕೊಂಡಿದ್ದವನಿಗೆ ಬದುಕು ಅಂದರೆ ಏನೆಂದೇ ಗೊತ್ತಿರದ ಮುಗ್ಧತೆ. ಎಷ್ಟೇ ತಂಟೆ ಮಾಡಿದರೂ ಅಮ್ಮ ಅವನಿಗೆ ಒಂದು ಪೆಟ್ಟು ಕೊಟ್ಟವಳಲ್ಲ. ಬಾಯಿಮಾತಿನ ಗದರಿಕೆ. ‘ಅಪ್ಪ ಬರ್ಲಿ, ಉಂಟು ನಿಂಗೆ ಹಬ್ಬ...’ ಅಂದರೆ ಅದೇ ದೊಡ್ಡ ಎಚ್ಚರಿಕೆ. ಯಾರೋ ಹೊರಗಿನವಳು ಇವನ ತಂಟೆ ತಕರಾರು ಸಹಿಸಿಕೊಂಡು ಮುದ್ದು ಮಾಡುತ್ತಾಳಾ? ಸುನಂದೆ ಬದುಕಿದ್ದಾಗ ಸಣ್ಣಪುಟ್ಟ ವಿಷಯಗಳಿಗೂ ಈ ಅಕ್ಕ, ತಮ್ಮ ನಾಯಿ, ಬೆಕ್ಕುಗಳಂತೆ ಕಚ್ಚಾಡಿಕೊಂಡಿದ್ದಿದೆ. ಈ ನಾಯಿ, ಬೆಕ್ಕುಗಳ ಹೋಲಿಕೆ ಹೇಳುತ್ತಿದ್ದುದೂ ಅಮ್ಮನೇ. ಆದರೆ ಅವೆಲ್ಲಾ ಹುಡುಗಾಟದ ವಯಸ್ಸಿನ ಸಹಜ ಪ್ರತಿಕ್ರಿಯೆಗಳೆಂಬಂತೆ ಈಗ ಅಮ್ಮನನ್ನು ಕಳೆದುಕೊಂಡಿದ್ದೇ ಏಕಾಏಕಿ ದೊಡ್ಡವಳಂತಾಗಿಬಿಟ್ಟಿದ್ದಳು ಭಾಮ. ಅಸಹಾಯಕನಂತೆ ಕಾಣುತ್ತಿದ್ದ ತಮ್ಮನಿಗೆ ತಾಯಿಯಾಗಿಬಿಟ್ಟಿದ್ದಳು. ಸ್ಕೂಲಿಗೆ ಹೋಗುವ ಹೊತ್ತಿಗೆ ಅವನನ್ನು ಸಿದ್ಧ ಮಾಡಿ

